
# ಒಂದು ಸ್ತಬ್ಧಚಿತ್ರ



ತಲೆ ತುಂಬ ಗದ್ದಲ
ಮತ್ತೆ ಮತ್ತೆ ತಟ್ಟುತ್ತಿದೆ
ಸಂತೆಯಲ್ಲೂ ಕೇಳುವ ಪರಿಚಿತ ಧ್ವನಿ
ಹಿಂಬಾಲಿಸಿದ್ದ ಗಮನಿಸಿದೆ
ತಿರುಗಿ ನೋಡಿದೆ. ಮುಚ್ಚಿದ ಬಾಗಿಲ
ತೆರೆಯಲು ಹವಣಿಸುತ್ತಿದೆ
ನಿಜದ ಕತೆಯಂತಹ ಒಂದು ಕವಿತೆ!

ಬಾಗಿಲ ಸಂಧಿಯಲ್ಲೆ ಕುಳಿತ ಹೃದಯಕ್ಕೆ
ವಿದಾಯ ಸಂದಾಯವಾಗಿದೆ.
ಒಪ್ಪ ಓರಣವಾಗಿಟ್ಟ
ಹಜಾರದಲ್ಲೂ ಬಿದ್ದ
ಎಲೆಗಳೆಲ್ಲ ಮತ್ತೆ
ಚೆಲ್ಲಾಪಿಲ್ಲಿಯಾಗದಂತೆ
ಗುಡಿಸಿ ಚಂದದ ಮಕಮಲ್ಲಿನ
ಮೇಲೆ ಹೂದಾನಿ ಇಡಲಾಗಿದೆ.
ಉಂಡು ಹೊದ್ದು ಮಲಗಿದ್ದ
ಮೌನ ಮಾತಾಗುತ್ತ ಆಗುತ್ತ
ಹಳೆಯ ಒಲವಿನ ಹಾಡಾಗುತ್ತಿದೆ!

ಮೂಲೆ ಸೇರಿದ ತಂಬೂರಿಯ
ಅಂಗಿ ಕಳಚಿ, ಬಿರಡೆ ತಿರುಪಿ
ನಾಲ್ಕು ತಂತಿಯ ಒಂದು
ಶ್ರುತಿಗೆ ತರಲಾಗಿದೆ!
ಬೋಳಾದ ಉಸಿರಿಗೆ
ಜೀವ ತುಂಬಲು ಅಣಿಯಾಗಿದ್ದೇನೆ.
ಗಾಳಿಬೇನೆಗೆ ಮರಗಟ್ಟಿ
ಮಲಗಿದ್ದ ಮನಸಿಗೆ
ಮಸಾಜು ಮಾಡಿ ಎಬ್ಬಿಸಿ
ಕೂಡ್ರಿಸಿದ್ದೇನೆ.

ಏನೆಲ್ಲ ಉಳಿದಿವೆ! ಹೊಸೆದು
ಹೊಸದ ಹೇಳಲು.
ಉಳಿಸಿಕೊಂಡ ಹಳವಂಡಗಳ
ಹಂಚಿಕೊಳ್ಳುತ್ತಿರುವೆ.
ಹಳೆಯ ಕತೆಯಂತಹ ಕವಿತೆಯಲ್ಲಿ ನನ್ನ
ಹಾಗೇ ಬಿಟ್ಟುಬಿಡು!!

• ವಿದ್ಯಾ ಭರತನಹಳ್ಳಿ